**ಓ.ಎಸ್. ನಂಬರಃ 112/2023**

**ಪಿ. ಡಬ್ಲ್ಯೂಃ 1**

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 13-02-2026)

**ಪಾಟೀ ಸವಾಲುಃ 1 ರಿಂದ 5ನೇ ಪ್ರತಿವಾದಿಗಳ ಪರ ಶ್ರೀ ಎಸ್.ವಿ.ಎ. ವಕೀಲರಿಂದ,**

ಈ ದಾವೆಯಲ್ಲಿರುವ 1 ಮತ್ತು 2ನೇ ಪ್ರತಿವಾದಿಗಳು ನನ್ನ ತಂದೆ, ತಾಯಿ ಎಂದರೆ ಹೌದು. ಮೃತ 3ನೇ ಪ್ರತಿವಾದಿ, 4 ಮತ್ತು 5ನೇ ಪ್ರತಿವಾದಿಗಳು ನನ್ನ ಸಹೋದರರು ಎಂದರೆ ಹೌದು. ಈ ದಾವೆಯ ವಾದ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಹಾಗೆ ದಾಖಲಾತಿಗಳ ಬಗ್ಗೆಯೂ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಅಜ್ಜನ ಹೆಸರು ಮಂಜು ಪಕ್ಕಿ. ನನ್ನ ಅಜ್ಜ ಈಗ ಜೀವಂತವಾಗಿ ಇರುವುದಿಲ್ಲ. ನಾನು ಜನಿಸುವ ಪೂರ್ವದಲ್ಲೇ ನನ್ನ ಅಜ್ಜ ಮೃತರಾಗಿದ್ದರು. ನನ್ನ ಅಜ್ಜಿಯ ಹೆಸರು ದೇವಮ್ಮ. ನನ್ನ ಅಜ್ಜಿ ನನಗೆ ಎರಡು ವರ್ಷ ವಯಸ್ಸಿದ್ದಾಗ ಮೃತ ಪಟ್ಟಿರುತ್ತಾರೆ. ನನಗೆ ಈಗ 55 ವರ್ಷ ವಯಸ್ಸು ಆಗಿರಬಹುದು. ನನಗೆ 18-19 ವರ್ಷ ವಯಸ್ಸಿನವಳಿದ್ದಾಗ ಮದುವೆ ಮಾಡಿರುತ್ತಾರೆ. ನನಗೆ ಎರಡು ಜನ ಮಕ್ಕಳು. ಅದರಲ್ಲಿ ನನ್ನ ದೊಡ್ಡ ಮಗ ಅಂಗವೈಕಲ್ಯನಾಗಿರುತ್ತಾನೆ. ಅವನಿಗೆ 28 ವರ್ಷ ವಯಸ್ಸು.

2. ದಾವಾ ಆಸ್ತಿಗಳು ನನ್ನ ಅಜ್ಜನ ಸ್ವಂತ ಮಾಲ್ಕಿ ಆಸ್ತಿಗಳಾಗಿರುತ್ತವೆ. ನನ್ನ ಅಜ್ಜನಿಗೆ ದಾವಾ ಆಸ್ತಿಗಳು ಅವರ ತಂದೆಯವರ ಕಾಲದಿಂದ ಬಂದಿರುತ್ತದೆ. ಆ ಬಗ್ಗೆ ದಾಖಲಾತಿಗಳನ್ನು ನನ್ನ ವಕೀಲರಿಂದ ತೆಗೆಸಿ ನೋಡಿರುತ್ತೇನೆ. ನನ್ನ ಅಜ್ಜ ಮಂಜು ಪಕ್ಕಿ ಮತ್ತು ಅಜ್ಜಿ ದೇವಮ್ಮ ರವರಿಗೆ ನನ್ನ ತಂದೆ ಒಬ್ಬರೇ ಮಗ. ಬೇರೆ ಯಾರೂ ಮಕ್ಕಳು ಇರಲಿಲ್ಲ. ನನ್ನ ಅಜ್ಜ ಮರಣ ಹೊಂದಿದ ನಂತರ, ದಾವಾ ಆಸ್ತಿಗಳು ನನ್ನ ತಂದೆಯ ಹೆಸರಿಗೆ ಬಂದಿರುತ್ತದೆ. ನನ್ನ ಅಜ್ಜನಿಗೆ ದಾವಾ ಆಸ್ತಿಗಳು ಯಾವ ರೀತಿಯಲ್ಲಿ ಬಂತು ಎಂದು ನಾನು ವಿಚಾರಿಸಿರುವುದಿಲ್ಲ.

3. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಮೃತ 3ನೇ ಪ್ರತಿವಾದಿ, 4 ಮತ್ತು 5ನೇ ಪ್ರತಿವಾದಿಗಳು ಎಸ್.ಎಸ್.ಎಲ್.ಸಿ. ಯವರೆಗೆ ವ್ಯಾಸಂಗ ಮಾಡಿರುತ್ತಾರೆ. 3ನೇ ಪ್ರತಿವಾದಿ ನನ್ನ ಹಿರಿಯ ಸಹೋದರ. ನನಗೆ ಮತ್ತು 3ನೇ ಪ್ರತಿವಾದಿಗೆ 5 ವರ್ಷ ವಯಸ್ಸಿನ ವ್ಯತ್ಯಾಸ ಇರುತ್ತದೆ. ನನ್ನ ವಿವಾಹಕ್ಕಿಂತ ಪೂರ್ವದಲ್ಲಿ ನಾನು, ನನ್ನ ತಂದೆ, ತಾಯಿ ಮತ್ತು ನನ್ನ ಸಹೋದರರು ಜೊತೆಯಾಗಿ ವಾಸವಾಗಿದ್ದೆವು ಎಂದರೆ ಸರಿ. ನನ್ನ ವಿವಾಹದ ನಂತರ ನನ್ನ ಸಹೋದರರು ನನ್ನ ತಂದೆ, ತಾಯಿಯ ಜೊತೆ ವಾಸವಾಗಿದ್ದರು ಎಂದರೆ ಸರಿ. ನನ್ನ ತಂದೆಯ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನನ್ನ ತಂದೆಯವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಈಗಲೂ ಸಹ ಕುಟುಂಬದ ಹಿರಿಯರಾಗಿ ಕುಟುಂಬದ ಎಲ್ಲಾ ವ್ಯವಹಾರಗಳನ್ನು ಮತ್ತು ದಾವಾ ಆಸ್ತಿಗಳನ್ನು ನೋಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆ ನನ್ನ ತವರು ಮನೆಯ ಕರ್ತರಾಗಿದ್ದರು ಎಂದರೆ ಹೌದು. ನನ್ನ ತಂದೆಯವರು ಮಾಡುತ್ತಿದ್ದ ವ್ಯವಹಾರಕ್ಕೆ ಯಾರು ತಕರಾರು ಮಾಡುತ್ತಿರಲಿಲ್ಲ ಎಂದರೆ ಹೌದು. ನನ್ನ ತಂದೆಯವರಿಗೆ ಯಾವುದೇ ದುಶ್ಚಟಗಳು ಇಲ್ಲ ಎಂದರೆ ಹೌದು.

4. ನನ್ನ ವಿವಾಹವು ಯಾವ ಇಸವಿಯಲ್ಲಿ ಆಯಿತು ಎಂದು ನನಗೆ ಗೊತ್ತಿಲ್ಲ. ನನ್ನ ತವರು ಮನೆಯಿಂದ ನಾನು ವಾಸವಾಗಿರುವ ನನ್ನ ಗಂಡನ ಮನೆ ಅಂದಾಜು 1 ಕಿ.ಮೀ. ದೂರ ಇರಬಹುದು. ನನ್ನ

ತವರು ಮನೆಯ ಪಕ್ಕದಲ್ಲೇ ದಾವಾ ಆಸ್ತಿಗಳು ಇರುತ್ತವೆ. ನಾನು ವಿವಾಹವಾದ ನಂತರ ನನ್ನ ತವರು ಮನೆಗೆ ಎತ್ತಿನಜೋಡಿಯನ್ನು ತೆಗೆದುಕೊಂಡು ಬಂದು ಗದ್ದೆ ನೆಟ್ಟಿ ಮಾಡಿ ಹೋಗುತ್ತಿದ್ದೆನು. ನನ್ನ ಗಂಡನಿಗೆ ಅವರ ಕಡೆಯಿಂದ ಒಂದು ಎಕರೆ ಜಾಗ ಇತ್ತು. ಸ್ದ್ರಿ ಜಮೀನಿನ ಸಾಗುವಳಿಯನ್ನು ನಾನೇ ಮಾಡುತ್ತಿದ್ದೆನು. ನಾನು ವಿವಾಹವಾದ ನಂತರ ಸುಮಾರು 15 ವರ್ಷಗಳವರೆಗೆ ನನ್ನ ತವರು ಮನೆಗೆ ಗದ್ದೆ ನೆಟ್ಟಿ ಮಾಡಲು ಬರುತ್ತಿದ್ದೆನು. ಈಗಲೂ ನಾನು ನನ್ನ ತವರು ಮನೆಗೆ ಹೋಗುತ್ತೇನೆ. ಹಾಗಾಗಿ ನನ್ನ ತವರು ಮನೆಯಲ್ಲಿ ನನ್ನ ತಂದೆಯವರು ಏನೇ ವ್ಯವಹಾರ ಮಾಡಿದರೂ ಗೊತ್ತಾಗುತ್ತದೆ ಎಂದರೆ ಹೌದು. ಅದೇ ರೀತಿ ನನ್ನ ತಂದೆ ಅಂದರೆ 1ನೇ ಪ್ರತಿವಾದಿ ನಮ್ಮನ್ನೆಲ್ಲಾ ಕೂರಿಸಿಕೊಂಡು ವ್ಯವಹಾರದ ಬಗ್ಗೆ ತಿಳಿಸುತ್ತಿದ್ದರು ಎಂದರೆ ಹೌದು.

5. ಮೃತ 3ನೇ ಪ್ರತಿವಾದಿ, 4 ಮತ್ತು 5ನೇ ಪ್ರತಿವಾದಿಗಳಿಗೆ 1ನೇ ಪ್ರತಿವಾದಿಯೇ ಓದಿಸಿ, ವಿವಾಹ ಮಾಡಿ ಕೊಟ್ಟಿರುತ್ತಾರೆ ಎಂದರೆ, ಸಾಕ್ಷಿಯು 3ನೇ ಪ್ರತಿವಾದಿ ಮತ್ತು ನನಗೆ ಓದಿಸಿರುವುದಿಲ್ಲ, 4 ಮತ್ತು 5 ನೇ ಪ್ರತಿವಾದಿಯವರಿಗೆ ತಂದೆಯವರು ಓದಿಸಿರುತ್ತಾರೆ, ಹಾಗೆ ನನ್ನ ಎಲ್ಲಾ ಸಹೋದರರಿಗೆ ತಂದೆಯವರೇ ವಿವಾಹ ಮಾಡಿಸಿಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆ ಕುರಿತು ಖರ್ಚು-ವೆಚ್ಚಗಳನ್ನು ನನ್ನ ತಂದೆಯವರೇ ನೋಡಿಕೊಂಡಿರುತ್ತಾರೆ ಎಂದರೆ ಹೌದು. ಕುಟುಂಬದ ಖರ್ಚಿಗಾಗಿ ನನ್ನ ತಂದೆ 1ನೇ ಪ್ರತಿವಾದಿ ಸೊಸೈಟಿಗಳಿಂದ ಸಾಲ ಪಡೆಯುತ್ತಿದ್ದರು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ ನನ್ನ ತಂದೆ ಮಹಿಳಾ ಪತ್ತಿನ ಸಹಕಾರಿ ಸಂಘ, ಮುರ್ಡೇಶ್ವರ ಗ್ರಾಮ ಸೇವಾ ಸಹಕಾರಿ ಸಂಘ ಮತ್ತು ಮಿಲಾಗ್ರಿಸ್ ಸೊಸೈಟಿಯಲ್ಲಿ ಸಾಲ ಪಡೆದಿರುವ ಬಗ್ಗೆ ಭೋಜಾ ದಾಖಲಾಗಿರುತ್ತದೆ ಎಂದರೆ ಗೊತ್ತಿಲ್ಲ. ನನ್ನ ತಂದೆ 5 ನೇ ಪ್ರತಿವಾದಿಯ ಜೊತೆ ವಾಸವಾಗಿದ್ದಾರೆ. 5 ನೇ ಪ್ರತಿವಾದಿ ಹಳೆಯ ಮನೆಯಲ್ಲಿ ವಾಸವಾಗಿದ್ದಾರೆ. ಮೃತ 3ನೇ ಪ್ರತಿವಾದಿ ಬೇರೆ ಮನೆ ಕಟ್ಟಿಕೊಂಡಿರುತ್ತಾರೆ. 4ನೇ ಪ್ರತಿವಾದಿಯೂ ಸಹ ಬೇರೆ ಮನೆ ಕಟ್ಟಿರುತ್ತಾರೆ. 3 ಮತ್ತು 4 ನೇ ಪ್ರತಿವಾದಿಗಳ ಮನೆ ದಾವಾ ಸ್ವತ್ತಿನಲ್ಲಿ ಇರುತ್ತದೆ. 3 ಮತ್ತು 4 ನೇ ಪ್ರತಿವಾದಿಗಳು ಅವರ ಮನೆಗಳನ್ನು ಕಟ್ಟಿ, ಈಗ ಹತ್ತು ವರ್ಷಗಳಾಗಿರಬಹುದು.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 1 ರಿಂದ 5ನೇ ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**